# ಸಲಫೀ ಮನ್‌ಹಜ್

# [ المنهج السلفي ]

**[Kannada – ಕನ್ನಡ – كنادي ]**


**ಅಹ್ಮದ್ ಇಬ್ನ್ ಯಹ್ಯಾ ಅನ್ನಜ್ಮೀ**

**أحمد بن يحيي النجمي**

**ಅನುವಾದ: ಮುಹಮ್ಮದ್ ಹಂಝಾ ಪುತ್ತೂರು**

**ترجمة: محمد حمزة بتوري**



IslamHouse.com

**1436 – 2015**

بِسْمِ اللهِ الرَّحْمَـنِ الرَّحِيم

1. ನಾವು ಅಲ್ಲಾಹನನ್ನು ತೌಹೀದ್‌ನ ಮೂಲಕ ಆರಾಧಿಸುತ್ತೇವೆ. ಆದ್ದರಿಂದ ನಾವು ಅಲ್ಲಾಹನ ಹೊರತು ಯಾರೊಂದಿಗೂ ಪ್ರಾರ್ಥಿಸುವುದಿಲ್ಲ. ಒಳಿತನ್ನು ತರುವ ಮತ್ತು ಹಾನಿಯನ್ನು ದೂರೀಕರಿಸುವ ವಿಷಯದಲ್ಲಿ ನಾವು ಅವನ ಹೊರತು ಯಾರಲ್ಲೂ ರಕ್ಷಣೆಯನ್ನು ಬೇಡುವುದಿಲ್ಲ. ನಾವು ಮುಶ್ರಿಕ್‌ಗಳೊಂದಿಗೆ ದ್ವೇಷ ಮತ್ತು ಶತ್ರುತ್ವವನ್ನು ಇಟ್ಟುಕೊಂಡೇ ಅಲ್ಲಾಹನನ್ನು ಆರಾಧಿಸುತ್ತೇವೆ. ಆದರೂ ಅವರನ್ನು ಮೊಟ್ಟಮೊದಲು ತೌಹೀದ್‌ನೆಡೆಗೆ ಆಹ್ವಾನಿಸಬೇಕಾದ ಮತ್ತು ತೌಹೀದ್ ಇಲ್ಲದಿದ್ದರೆ ಇಸ್ಲಾಮ್ ಇಲ್ಲ, ಅಲ್ಲಾಹನ ಹೊರತು ಅನ್ಯರನ್ನು ಕರೆದು ಪ್ರಾರ್ಥಿಸುವವನು ಅವಿಶ್ವಾಸಿಯಾಗಿರುವನು ಎಂಬುದನ್ನು ಅವರಿಗೆ ಸ್ಪಷ್ಟಪಡಿಸಿಕೊಡಬೇಕಾದ ಬಾಧ್ಯತೆ ನಮಗಿದೆ. ಆದರೆ ಅದರ ಬಳಿಕವೂ ಯಾರಾದರೂ ಅದರಲ್ಲೇ ಹಟತೊಟ್ಟು ನಿಂತರೆ, ಆ ಸಂದರ್ಭದಲ್ಲಿ ಅವರಿಂದ ದೂರ ಸರಿಯುವುದು ಮತ್ತು ಅಲ್ಲಾಹನಿಗೋಸ್ಕರ ಅವರನ್ನು ದ್ವೇಷಿಸುವುದು ನಮ್ಮ ಮೇಲೆ ಕಡ್ಡಾಯವಾಗಿದೆ.

2. ಸಲಫ್‌ಗಳ ವಿಶ್ವಾಸವು ಈ ಕೆಳಗಿನ ತತ್ವದ ಮೇಲೆ ಆಧಾರಿತವಾಗಿದೆ.

‘ಅಲ್ಲಾಹು ಅವನ ಗ್ರಂಥದ ಮೂಲಕ ಮತ್ತು ಅವನ ಸಂದೇಶವಾಹಕ(ﷺ)ರವರ ನಾಲಗೆಯ ಮೂಲಕ ತನ್ನನ್ನು ಹೇಗೆ ವರ್ಣಿಸಿದ್ದಾನೋ ಅದೇ ವಿಧದಲ್ಲಿ ತಹ್ರೀಫ್, ತಮ್ಸೀಲ್, ತಶ್ಬೀಹ್, ತಅ್‌ತೀಲ್ ಮತ್ತು ತಅ್‌ವೀಲ್ ಇಲ್ಲದೆ ಅವನನ್ನು ವರ್ಣಿಸಲಾಗಬೇಕು.’(1)

3. ಅಲ್ಲಾಹು ಸ್ವತಃ ಅವನಿಗಾಗಿ ದೃಢೀಕರಿಸಿದ ಮತ್ತು ಅವನು ಸ್ವತಃ ಅವನನ್ನೇ ಪ್ರಶಂಸಿಸಿದ, ಕುರ್‌ಆನ್ ಮತ್ತು ಸುನ್ನಃದಲ್ಲಿರುವ ಅತ್ಯುತ್ತಮ ನಾಮಗಳು ಅವನಿಗಿವೆಯೆಂಬುದನ್ನು ನಾವು ದೃಢೀಕರಿಸುತ್ತೇವೆ.

4. ಅಲ್ಲಾಹನ ಸಂತೃಪ್ತಿಯನ್ನು ಗಳಿಸಲು ಮತ್ತು ಸ್ವರ್ಗವನ್ನು ಪ್ರವೇಶಿಸಲು ಪ್ರವಾದಿ(ﷺ)ರವರ ಮಾರ್ಗದ ಮೂಲಕ ವಲ್ಲದೆ ಬೇರೆ ಮಾರ್ಗಗಳಿಲ್ಲವೆಂದು ನಾವು ವಿಶ್ವಾಸವಿಡುತ್ತೇವೆ. ಆದ್ದರಿಂದ ಯಾರಾದರೂ ಅಲ್ಲಾಹನ ಸಂತೃಪ್ತಿಯನ್ನು ಗಳಿಸಲು ಪ್ರವಾದಿ(ﷺ)ರವರದ್ದಲ್ಲದ ಬೇರೆ ಮಾರ್ಗವನ್ನು ಅವಲಂಬಿಸಿದರೆ ಅವನು ಪಥಭ್ರಷ್ಟನಾಗಿರುವನು ಮತ್ತು ಸತ್ಯದೆದುರು ಕುರುಡನಾಗಿರುವನು. ಅವನು ಇಹಲೋಕದಲ್ಲೂ ಪರಲೋಕದಲ್ಲೂ ನಷ್ಟ ಹೊಂದಿದವನಾಗಿರುವನು.

5. ಅಲ್ಲಾಹನ ಕಾನೂನು ಎಂದರೆ ಅದು ಎರಡು ಅವತೀರ್ಣಗಳ ಮೂಲಕ ಅಂದರೆ ಅಲ್ಲಾಹನ ಗ್ರಂಥ ಮತ್ತು ಅವನ ಸಂದೇಶವಾಹಕ(ﷺ)ರವರ ಸುನ್ನಃದ ಮೂಲಕ ಅವತೀರ್ಣಗೊಂಡದ್ದಾಗಿದೆಯೆಂದು ನಾವು ವಿಶ್ವಾಸವಿಡುತ್ತೇವೆ. ನಮ್ಮ ರಬ್ಬ್ ಈ ಕೆಳಗಿನ ವಚನದಲ್ಲಿ ಸೂಚಿಸಿದ್ದು ಅದನ್ನೇ ಆಗಿದೆ.

﴿ ثُمَّ جَعَلْنَاكَ عَلَىٰ شَرِيعَةٍ مِنَ الْأَمْرِ فَاتَّبِعْهَا وَلَا تَتَّبِعْ أَهْوَاءَ الَّذِينَ لَا يَعْلَمُونَ ﴾

(الجاثية 43)

“(ಓ ಪ್ರವಾದಿಯವರೇ!) ತರುವಾಯ ತಮ್ಮನ್ನು ನಾವು ನಮ್ಮ ಆಜ್ಞೆಯ ಆಧಾರದಲ್ಲಿರುವ ಒಂದು ಶರೀಅತ್ತಿನ (ಕಾನೂನು ವ್ಯವಸ್ಥೆಯ) ಮೇಲೆ ಮಾಡಿದೆವು. ಆದ್ದರಿಂದ ತಾವು ಅದನ್ನು ಅನುಸರಿಸಿರಿ. ಅರಿವಿಲ್ಲದವರ ದೇಹೇಚ್ಛೆಗಳನ್ನು ತಾವು ಅನುಸರಿಸದಿರಿ.” [ಕುರ್‌ಆನ್ 45:18]

6. ಕುರ್‌ಆನ್ ಅಲ್ಲಾಹನ ವಚನ (ಮಾತು) ಆಗಿದೆಯೆಂದು ನಾವು ವಿಶ್ವಾಸವಿಡುತ್ತೇವೆ. ಅದು ಅವತೀರ್ಣಗೊಂಡದ್ದಾಗಿದೆ, ಸೃಷ್ಟಿಸಲ್ಪಟ್ಟದ್ದಲ್ಲ. ಸುನ್ನಃ ಅದರ ವಿವರಣೆಯೂ ವಿಶದೀಕರಣವೂ ಆಗಿದೆ. ಕುರ್‌ಆನನ್ನು ಸುನ್ನಃದ ಮೂಲಕ, ಸಹಾಬಾಗಳ ವ್ಯಾಖ್ಯಾನದ ಮೂಲಕ ಮತ್ತು ಉತ್ತಮ ರೀತಿಯಲ್ಲಿ ಅವರನ್ನು ಅನುಸರಿಸಿದವರ ವ್ಯಾಖ್ಯಾನದ ಮೂಲಕ ವ್ಯಾಖ್ಯಾನಿಸಬೇಕಾಗಿದೆ. ಆದ್ಧರಿಂದ ಕುರ್‌ಆನ್‌ನ್ನು ವ್ಯಾಖ್ಯಾನ ಮಾಡಬೇಕಾದುದು ನಿರೂಪಣೆಯ ಮೂಲಕ, ಅಂದರೆ ಸಹಾಬಾಗಳ

ಮೂಲಕ, ತಾಬಿಊನ್‌ಗಳ ಮೂಲಕ ಮತ್ತು ಅದಕ್ಕೆ ಸಂಬಂಧಿಸಿದ ಹದೀಸ್‌ಗಳ ಮೂಲಕವಾಗಿದೆ. ಈ ವ್ಯಾಖ್ಯಾನಗಳನ್ನು ಒಳಗೊಂಡಿರುವ ಗ್ರಂಥಗಳನ್ನು ಉದಾ: ಇಬ್ನ್ ಜರೀರ್‌ರವರ ತಫ್ಸೀರ್, ಇಬ್ನ್ ಕಸೀರ್‌ರವರ ತಫ್ಸೀರ್, ಅಲ್‌ಬಗವೀಯವರ ತಫ್ಸೀರ್, ಅಸ್ಸುಯೂತೀಯವರ ದುರ್‍ರುಲ್ ಮನ್ಸೂರ್ ಮೊದಲಾದ ಗ್ರಂಥಗಳನ್ನು ಸಂಪಾದಿಸುವುದು ಮತ್ತು ಓದುವುದು ನಮಗೆ ಕಡ್ಡಾಯವಾಗಿದೆ.

7. ಸುನ್ನಃವನ್ನು –ಅಂದರೆ ಅದರ ವಿಶ್ವಾಸಾರ್ಹತೆ ಮತ್ತು ಬಲಹೀನತೆಯ ವಿಷಯದಲ್ಲಿ– ಮುಹದ್ದಿಸೂನ್ (ಹದೀಸ್ ವಿದ್ವಾಂಸರ)ಗಳಿಂದ ಸ್ವೀಕರಿಸುವುದು ನಮಗೆ ಅನಿವಾರ್ಯವಾಗಿದೆ. ಆದ್ದರಿಂದ ಅದರಲ್ಲಿ ಸಹೀಹ್ ಆಗಿ ನಾವು ಏನನ್ನು ಕಾಣುತ್ತೇವೆಯೋ ಅದನ್ನು ಸ್ವೀಕರಿಸುತ್ತೇವೆ ಮತ್ತು ದಈಫ್ ಆಗಿ ಏನನ್ನು ಕಾಣುತ್ತೇವೆಯೋ ಅದನ್ನು ತಿರಸ್ಕರಿಸುತ್ತೇವೆ.

8. ಆಡಳಿತಗಾರರು ಎಲ್ಲಿಯ ತನಕ ಮುಸ್ಲಿಮರಾಗಿದ್ದು ಅಲ್ಲಾಹನ ಕಾನೂನಿನ ಮೂಲಕ ತೀರ್ಪನ್ನು ಅರಸುತ್ತಾರೋ ಮತ್ತು ಎಲ್ಲಿಯ ತನಕ ಶರೀಅತ್ ನಿರ್ದೇಶಿಸಿದ ಶಿಕ್ಷಾ ವಿಧಿಗಳನ್ನು ಜಾರಿಗೊಳಿಸುತ್ತಾರೋ, ಹಾಗೂ ಅವರು ಎಲ್ಲಿಯ ತನಕ ನಮಾಝ್ ಸಂಸ್ಥಾಪಿಸುತ್ತಾರೋ ಅಲ್ಲಿಯ ತನಕ ಅವರನ್ನು ಅನುಸರಿಸುವ ಮೂಲಕ ನಾವು ಅಲ್ಲಾಹನನ್ನು ಆರಾಧಿಸುತ್ತೇವೆ. ಅವರು ದಬ್ಬಾಳಿಕೆ ಮಾಡಿದರೂ ಅವರ ಆಜ್ಞಾಪಾಲನೆ ಮಾಡುವುದು ನಮಗೆ ಕಡ್ಡಾಯವಾಗಿದೆ. ಇದಕ್ಕೆ ವಿರುದ್ಧವಾಗಿ ಯಾರಾದರೂ ಏನಾದರೂ ಹೇಳಿದರೆ ಮತ್ತು ಮುಸ್ಲಿಮ್ ನಾಯಕರ ವಿರುದ್ಧ –ಆ ನಾಯಕನು ದಬ್ಬಾಳಿಕೆಗಾರನಾಗಿದ್ದರೂ ಸಹ– ಬಂಡೇಳುವುದನ್ನು ಸಮ್ಮತಾರ್ಹಗೊಳಿಸಿದರೆ ಅವನೊಬ್ಬ ನೂತನವಾದಿಯೂ ಪಥಭ್ರಷ್ಟನೂ ಆಗಿರುವನು. ಅವನ ಹೇಳಿಕೆಯನ್ನು ಖಂಡಿಸುವುದು ಮತ್ತು ಅವನ ಪಥಭ್ರಷ್ಟತೆಯನ್ನು ಬಹಿರಂಗಪಡಿಸುವುದು ಉಲಮಾಗಳ ಮೇಲೆ ಕಡ್ಡಾಯವಾಗಿದೆ.

9. ನಾಯಕರ ತಪ್ಪುಗಳನ್ನು ಪ್ರಚಾರ ಮಾಡುವುದು ಸಮ್ಮತಾರ್ಹವಲ್ಲವೆಂದು ನಾವು ವಿಶ್ವಾಸವಿಡುತ್ತೇವೆ. ಯಾಕೆಂದರೆ ಹೀಗೆ

ಮಾಡಿದರೆ ಅದು ಪರೀಕ್ಷೆ ಮತ್ತು ವಿಪತ್ತು(ಫಿತ್ನ)ಗಳೆಡೆಗೆ ಪ್ರಭಾವ ಬೀರಿ ಅವು ಜರುಗುವಂತೆ ಮತ್ತು ಹರಡುವಂತೆ ಮಾಡುತ್ತದೆ.

10. ಸುನ್ನಃದ ಮೂಲಕ ಅಂದರೆ ಅದನ್ನು (ಸುನ್ನಃವನ್ನು) ಹಿಂಬಾಲಿಸುವ ಮೂಲಕ ಮತ್ತು ನೂತನಾಚಾರಗಳನ್ನು ಹಾಗೂ ನೂತನವಾದಿಗಳನ್ನು ಅಸಹ್ಯಪಡುವ ಮೂಲಕ ಅಲ್ಲಾಹನನ್ನು ಆರಾಧಿಸುವುದು ನಮ್ಮ ಮೇಲೆ ಕಡ್ಡಾಯವಾಗಿದೆ. ಇದು ಪ್ರವಾದಿ(ﷺ)ರವರ ಈ ಕೆಳಗಿನ ವಚನದ ಮೇಲೆ ಆಧಾರಿತವಾಗಿದೆ.

“ನಮ್ಮ ವಿಷಯದಲ್ಲಿಲ್ಲದ (ಧರ್ಮದಲ್ಲಿಲ್ಲದ) ಒಂದು ಕರ್ಮವನ್ನು ಯಾರಾದರೂ ಮಾಡಿದರೆ ಅದು ತಿರಸ್ಕೃತವಾಗಿದೆ.” ಇನ್ನೊಂದು ವರದಿಯಲ್ಲಿ: “ನಮ್ಮ ವಿಷಯದಲ್ಲಿಲ್ಲದ್ದನ್ನು (ಧರ್ಮದಲ್ಲಿಲ್ಲದ್ದನ್ನು) ಯಾರಾದರೂ ಹೊಸದಾಗಿ ನಿರ್ಮಿಸಿದರೆ ಅದು ತಿರಸ್ಕೃತವಾಗಿದೆ.”

ಇದು ಸಲಫ್‌ಗಳ ವಿಶ್ವಾಸದ ಬಗ್ಗೆಯಿರುವ ಒಂದು ಸಂಕ್ಷಿಪ್ತ ವಿವರಣೆ. ನಾವು ನಿಜವಾಗಿಯೂ ಮೋಕ್ಷವನ್ನು ಮತ್ತು ಸತ್ಯವನ್ನು ಬಯಸುವುದಾದರೆ ಇವುಗಳನ್ನು ಅನುಸರಿಸುವುದು ಕಡ್ಡಾಯವಾಗಿದೆ. ಆಧಾರವನ್ನು ಹೊಂದಿಲ್ಲದ ಜನರ ಅಭಿಪ್ರಾಯಗಳನ್ನು ನಾವು ತಿರಸ್ಕರಿಸಬೇಕಾಗಿದೆ. ಯಾಕೆಂದರೆ ಜನರು ಸತ್ಯದಿಂದಾಗಿ ಅರಿಯಲ್ಪಡುತ್ತಾರೆಯೇ ಹೊರತು ಸತ್ಯವು ಜನರಿಂದಾಗಿ ಅರಿಯಲ್ಪಡುವುದಿಲ್ಲ.

ಕೊನೆಯದಾಗಿ, ಅಲ್ಲಾಹು ನಮಗೆ ಸತ್ಯವನ್ನು ಸತ್ಯವಾಗಿ ತೋರಿಸಿಕೊಡಲು ಮತ್ತು ಅದನ್ನು ಹಿಂಬಾಲಿಸುವಂತೆ ಮಾಡಲು ಹಾಗೂ ಅಸತ್ಯವನ್ನು ಅಸತ್ಯವಾಗಿ ತೋರಿಸಿಕೊಡಲು ಮತ್ತು ಅದರಿಂದ ದೂರಸರಿಯುವಂತೆ ಮಾಡಲು ನಾವು ಅವನೊಂದಿಗೆ ಸದಾ ಪ್ರಾರ್ಥಿಸಬೇಕಾಗಿದೆ. ಖಂಡಿತವಾಗಿಯೂ ಅದನ್ನು ತೋರಿಸಿಕೊಡಬೇಕಾದ ಹೊಣೆಯು ಅಲ್ಲಾಹನದ್ದಾಗಿದೆ ಮತ್ತು ಅದು ಜರುಗುವಂತೆ ಮಾಡಲು ಅವನು ಸಾಮರ್ಥ್ಯವುಳ್ಳವನಾಗಿದ್ದಾನೆ. ಅವನ ಸಲಾತ್ ಮತ್ತು ಸಲಾಮ್ ಸೃಷ್ಟಿಗಳ ಪೈಕಿ ಅತಿ ಶ್ರೇಷ್ಠರಾದ, ಅತ್ಯಧಿಕ ಆಜ್ಞಾಪಾಲನೆ ಮಾಡುವ, ಅತ್ಯಧಿಕ ಭಯಭಕ್ತಿಯುಳ್ಳ ಮತ್ತು ಅತ್ಯಧಿಕ ಪರಿಶುದ್ಧರಾದ ಮುಹಮ್ಮದ್(ﷺ)ರವರ

ಮೇಲೆ, ಅವರ ಕುಟುಂಬದ ಮೇಲೆ ಮತ್ತು ಅವರ ಸಹಾಬಾಗಳ ಮೇಲೆ ಇರಲಿ.

ಟಿಪ್ಪಣಿ:

1. ಇವು ಅಲ್ಲಾಹನ ನಾಮ ಮತ್ತು ವಿಶೇಷಣಗಳ ವಿರುದ್ಧ ಎಸಗಲಾಗುವ ನಿಷಿದ್ಧ ಕೃತ್ಯಗಳಾಗಿವೆ. ತಹ್ರೀಫ್ ಎಂದರೆ ಅಲ್ಲಾಹನ ನಾಮ ಅಥವಾ ವಿಶೇಷಣವನ್ನು ಬದಲಾಯಿಸುವುದು ಅಥವಾ ವಿರೂಪಗೊಳಿಸುವುದು. ತಮ್ಸೀಲ್ ಮತ್ತು ತಶ್ಬೀಹ್ ಎಂದರೆ ಅಲ್ಲಾಹನ ನಾಮ ಅಥವಾ ವಿಶೇಷಣಕ್ಕೆ ಹೋಲಿಕೆಯನ್ನು ನೀಡುವುದು. ತಅ್ತೀಲ್ ಎಂದರೆ ಅಲ್ಲಾಹನ ನಾಮ ಅಥವಾ ವಿಶೇಷಣವನ್ನು ಸಂಪೂರ್ಣವಾಗಿ ನಿರಾಕರಿಸುವುದು. ತಅ್ವೀಲ್ ಎಂದರೆ ಅಲ್ಲಾಹನ ನಾಮ ಅಥವಾ ವಿಶೇಷಣವನ್ನು ದುರ್ವ್ಯಾಖ್ಯಾನ ಮಾಡುವುದು ಅಥವಾ ಅದರ ಅರ್ಥವನ್ನು ಬದಲಾಯಿಸುವುದು.

وَصَلَّى اللهُ وَسَلَّم عَلَى نَبِيِّنَا مُحَمَّدٍ وَعَلَى آلِهِ وَصَحْبِهِ أَجْمَعِين .

*********